ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560001**

ಸಂಖ್ಯೆ : ಸಿ7(1)ಪ್ರಾಶಿಅ/ಶಾ.ಸ್ಥ12/2019-20/311122 ದಿನಾಂಕ : 20/09/2019

## : ಸು ತ್ತೋ ಲೆ :

***ವಿಷಯ*** : ಶಾಲೆಗಳನ್ನು ಸ್ಥಳಾಂತರಿಸಲು / ಹಸ್ತಾಂತರಿಸಲು ಪ್ರಸ್ತಾವನೆ ಸಲ್ಲಿಸುವ ಸಂದರ್ಭದಲ್ಲಿ ಪರಿಶೀಲಿಸಬೇಕಾದ ಕ್ರಮಗಳ ಬಗ್ಗೆ.
***ಉಲ್ಲೇಖ:*** ಮಾನ್ಯ ಆಯುಕ್ತರ ಆದೇಶದಂತೆ.

******

ವಿಷಯಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಉಪನಿದೇಶಕರುಗಳ ಕಛೇರಿಯಿಂದ ಶಾಲೆಗಳ ಹಸ್ತಾಂತರ ಮತ್ತು ಸ್ಥಳಾಂತರಕ್ಕೆ ಸಲ್ಲಿಸುತ್ತಿರುವ ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸದೆ ಮಾಹಿತಗಳನ್ನು ಅಪೂರ್ಣವಾಗಿ ಹಾಗೂ ಉಪನಿರ್ದೇಶಕರು / ಕ್ಷೇತ್ರ ಶಿಕ್ಷಣಾಧಿಕಾರಿಗಳ ಸ್ಪಷ್ಟ ಅಭಿಪ್ರಾಯವಿಲ್ಲದೆ ಸಲ್ಲಿಸುತ್ತಿರುವುದು ಮಾನ್ಯ ಆಯುಕ್ತರು ಗಮನಿಸಿರುತ್ತಾರೆ. ಆದ್ದರಿಂದ ಪ್ರಸ್ತಾವನೆಯಗಳನ್ನು ಸಲ್ಲಿಸುವ ಸಂದರ್ಭದಲ್ಲಿ ಈ ಕೆಳಕಂಡ ಮಾಹಿತಿಗಳನ್ನು ತಪ್ಪದೇ ಪರಿಶೀಲಿಸಿ ಪ್ರಸ್ತಾವನೆಯನ್ನು ಸಲ್ಲಿಸುವುದು.

ಇಲಾಖೆಯಿಂದ ಮಾನ್ಯತೆಯನ್ನು ಪಡೆದು ಶಾಲೆಯನ್ನು ನಡೆಸುತ್ತಿದ್ದ ಸ್ಥಳದಿಂದ ಸ್ವಂತ ಕಟ್ಟಡಕ್ಕೆ **[ಸ್ಥಳಾಂತರ ಒಂದು ಪಂಚಾಯಿತಿ ವ್ಯಾಪ್ತಿಯಿಂದ ಅದೇ ಪಂಚಾಯಿತಿ ವ್ಯಾಪ್ತಿಯ ಇನ್ನೊಂದು ಪ್ರದೇಶಕ್ಕೆ ಅಥವಾ ನಗರ ಪ್ರದೇಶದ ವ್ಯಾಪ್ತಿಯಿಂದ ಅದೇ ನಗರ ಪ್ರದೇಶದ ವ್ಯಾಪ್ತಿಗೆ ಹೊಂದುವ ಗ್ರಾಮಾಂತರ ಪ್ರದೇಶಕ್ಕೆ]** ಶಾಲೆಯನ್ನು ಸ್ಥಳಾಂತರಿಸಲು ಮಾತ್ರ ನಿಯಮಗಳಲ್ಲಿ ಮತ್ತು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಅವಕಾಶದಡಿಯಲ್ಲಿ ಸ್ಥಳಾಂತರ ಹೊಂದುವ ಶಾಲೆಯನ್ನು ಹೊಸ ಶಾಲೆ ಎಂದು ಪರಿಗಣಿಸಬೇಕಾಗಿರುತ್ತದೆ.

ಅದ್ದರಿಂದ, ಇಂತಹ ಶಾಲೆಗಳ ಪ್ರಸ್ತಾವನೆಯನ್ನು ಸಲ್ಲಿಸುವಾಗ ಹೊಸ ಶಾಲೆಗೆ ಯಾವ ಯಾವ ಮಾನದಂಡಗಳನ್ನು ಅನುಸರಿಸಿ ನೋಂದಣಿ/ಮಾನ್ಯತೆಯನ್ನು ನೀಡಲಾಗುತ್ತದೆಯೋ ಆ ಎಲ್ಲಾ ಮಾನ ದಂಡಗಳನ್ನು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ ಎಂಬ ಬಗ್ಗೆ ತಾವು [ಉಪನಿರ್ದೇಶಕರು] ಖುದ್ಧು ಸ್ಥಳ ಪರಿಶೀಲನೆ ಮಾಡಿ, ಎಲ್ಲಾ ಮಾನದಂಡಗಳನ್ನು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಂಡಿದ್ದಲ್ಲಿ ತಮ್ಮ ವರದಿಯಲ್ಲಿ ಸ್ಪಷ್ಟವಾಗಿ ನಮೂದಿಸಿ, ಎಲ್ಲಾ ಮಾಹಿತಿ / ದಾಖಲೆಗಳನ್ನು ದೃಢೀಕರಿಸಿ, ಸ್ಪಷ್ಟ ಅಭಿಪ್ರಾಯದ ವರದಿಯೊಂದಿಗೆ ಆಕ್ಷೇಪಣೆಗೆ ಅವಕಾಶ ನೀಡದಂತೆ ಎಲ್ಲಾ ಮಾಹಿತಿಗಳನ್ನು ಸಮರ್ಪಕವಾಗಿ ಪ್ರಸ್ತಾವನೆ ಸಲ್ಲಿಸುವಾಗಲೇ ಪಡೆಯುವಂತೆ ಮಾನ್ಯ ಆಯುಕ್ತರು ಆದೇಶಿಸಿರುತ್ತಾರೆ.

ಅದರಂತೆ, ಇನ್ನು ಮುಂದೆ ಸ್ಥಳಾಂತರಕ್ಕೆ ಪ್ರಸ್ತಾವನೆ ಸಲ್ಲಿಸುವಾಗ ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ಶಾಲೆಗೆ ಇರಬೇಕಾದ ಎಲ್ಲಾ ಮೂಲಭೂತ ಸೌಕರ್ಯಗಳನ್ನು / ಮಾನದಂಡಗಳನ್ನು ಹೊಂದಿರುವ ಬಗ್ಗೆ ಪರಿಶೀಲಿಸಿ, ದೃಢೀಕೃತ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿದೆ. ಅಪೂರ್ಣ ಪ್ರಸ್ತಾವನೆಯನ್ನು ಸಲ್ಲಿಸಿದಲ್ಲಿ ತಮ್ಮ ಕರ್ತವ್ಯ ಲೋಪವೆಂದು ಪರಿಗಣಿಸಲಾಗುವುದು. ಹಾಗೂ ಈ ಬಗ್ಗೆ ಮುಂದಿನ ಆಗುಹೋಗುಗಳಿಗೆ ನೀವೇ ನೇರ ಹೊಣೆಗಾರರಾಗಿರುತ್ತೀರಿ.

*ತಮ್ಮ ನಂಬುಗೆಯ*

*[ಎಂ.ಪಿ.ಮಾದೇಗೌಡ]*

*ನಿರ್ದೇಶಕರು [ಪ್ರಾಥಮಿಕ ಶಿಕ್ಷಣ]*

***ಇವರಿಗೆ:***

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
3. ಮಾನ್ಯ ಆಯುಕ್ತರ ಆಪ್ತ ಸಹಾಯಕರು, ಆಯುಕ್ತರ ಆಪ್ತ ಶಾಖೆ.
4. ಮಾನ್ಯ ನಿರ್ದೇಶಕರು [ಪ್ರಾಥಮಿಕ ಶಿಕ್ಷಣ] ಮತ್ತು [ಪ್ರೌಢ ಶಿಕ್ಷಣ] ಆಪ್ತ ಸಹಾಯಕರುಗಳಿಗೆ.
5. ಕಛೇರಿ ಪತ್ರ.